# ಕರುಣಾಸಾಗರ ಶ್ರೀರಾಮಕೃಷ್ಣ

ಗಿರೀಶ್‌ಚಂದ್ರ ಘೋಷ್



**ನಾ**ನು ದಾರಿಗಾಣದೆ ತುಮುಲದಲ್ಲಿ ಸಿಲುಕಿದ್ದಾಗ, ಇರಿದು ತಿನ್ನುವ ಹೃದಯವೇದನೆಯನ್ನು ಅನುಭವಿಸುತ್ತಿದ್ದಾಗ ಶ್ರೀರಾಮಕೃಷ್ಣರು ನನಗೆ ಆಶ್ರಯವಿತ್ತರು. ಚಿಕ್ಕಂದಿನಲ್ಲಿ ನಾನು ಬೆಳೆದ ರೀತಿ, ಬಾಲ್ಯದಲ್ಲಿ ವಾರಸುದಾರರು ಇಲ್ಲದೆ ಇದ್ದುದು, ಯೌವನದ ಸ್ವೇಚ್ಛಾಪ್ರವೃತ್ತಿಗಳು – ಇವೆಲ್ಲ ಸೇರಿ ಆಧ್ಯಾತ್ಮಿಕ ಮಾರ್ಗದಿಂದ ನನ್ನನ್ನು ದೂರ ಕೊಂಡೊಯ್ದವು. ನಾಸ್ತಿಕವಾದವೇ ಎಲ್ಲರೂ ಸಾಗುವ ದಾರಿಯಾಗಿತ್ತು. ದೇವರ ಅಸ್ತಿತ್ವವನ್ನು ನಂಬುವುದು ಮೂರ್ಖತನದ, ದೌರ್ಬಲ್ಯದ ಸಂಕೇತವಾಗಿತ್ತು. ನನ್ನ ಸ್ನೇಹಿತರ ಗುಂಪಿನಲ್ಲಿ, ಯಾರಾದರೂ ದೇವರಿಲ್ಲವೆಂದು ಸಾಧಿಸಿದರೆ ಅವರಿಗೆ ಅತ್ಯುನ್ನತ ಪ್ರಶಂಸೆ ಮತ್ತು ಗೌರವ ದೊರೆಯುತ್ತಿತ್ತು. ದೇವರಿರುವನು ಎಂದು ನಂಬುವವರನ್ನು ಹಾಸ್ಯ ಮಾಡುತ್ತಿದ್ದೆ. ಕೆಲವು ಪುಟಗಳು ವಿಜ್ಞಾನವನ್ನು ಓದಿ, ಧರ್ಮವೆಂಬುದು ಕೇವಲ ಕಲ್ಪನೆ ಮತ್ತು ಪೊಳ್ಳು ಎಂದು ನಿರ್ಣಯಿಸಿದೆ. ಜನರು ನೀತಿಯಿಂದ ನಡೆಯುವಂತೆ ಮಾಡುವುದಕ್ಕೆ ಮತ್ತು ದುರ್ಮಾರ್ಗಕ್ಕೆ ಹೋಗದಂತೆ ಹೆದರಿಸುವುದಕ್ಕೆ ಪುರೋಹಿತರು ಧರ್ಮವನ್ನು ಸೃಷ್ಟಿಸಿದರು ಎಂದು ಭಾವಿಸಿದೆ. ತಪ್ಪೊ ಸರಿಯೊ, ಹೇಗಾದರೂ ನಮ್ಮ ಗುರಿಯನ್ನು ಸಾಧಿಸುವುದರಲ್ಲಿಯೇ ಬುದ್ಧಿವಂತಿಕೆ ಇದೆ ಎಂದು ಪರಿಗಣಿಸಿದೆ. ಅಯೋಗ್ಯ ಕೆಲಸ ದೂಷಣಾರ್ಹ. ಯಾವಾಗ? ಸಿಕ್ಕಿಬಿದ್ದ ಮೇಲೆ; ಅದಕ್ಕೆ ಮುಂಚೆ ಅಲ್ಲ. ಪಾಪ ಆಗುವುದು ಬೆಳಕಿಗೆ ಬಂದಾಗ ಮಾತ್ರ. ತಮ್ಮ ಉದ್ದೇಶವನ್ನು ರಹಸ್ಯವಾಗಿ ಸಾಧಿಸುವುದೇ ಪ್ರತಿಭೆಗೆ ಸಾಕ್ಷಿ. ಆಸೆಗಳನ್ನು ಚತುರತೆಯಿಂದ ಪೂರೈಸಿಕೊಳ್ಳುವುದೇ ಬುದ್ಧಿವಂತಿಕೆಯ ಸಂಕೇತ. (ಇದೇ ನನ್ನ ಆಲೋಚನೆಯಾಗಿತ್ತು.) ಆದರೆ ವಿಧಿ ಆಳುತ್ತಿರುವ ಈ ಪ್ರಪಂಚದಲ್ಲಿ ಅಂತಹ ಬುದ್ಧಿವಂತಿಕೆ ಹೆಚ್ಚು ಕಾಲ ನಿಲ್ಲುವುದಿಲ್ಲ. ಕೆಟ್ಟ ಕಾಲ ಬಂದೇ ಬರುವುದು. ಅದು ಬಂದಾಗ ಕಠಿಣ ಸತ್ಯಗಳನ್ನು ನಮಗೆ ಬೋಧಿಸುವುದು. ಅವುಗಳಿಂದ ನಾನು ಒಂದು ದೊಡ್ಡ ಪಾಠ ಕಲಿತೆ – ಏನೇ ಮಾಡಿದರೂ ದುಷ್ಕರ್ಮಗಳನ್ನು ಬಚ್ಚಿಡಲಾಗುವುದಿಲ್ಲ ಎಂದು. 'ಕೊಲೆ ಯಾವಾಗಲಾದರೂ ಬಹಿರಂಗವಾಗಿಯೇ ತೀರುವುದು' ಎಂಬ ಮಾತಿದೆ. ಅದು ಬಹಳ ನಿಜ ಎಂದು ನಾನು ಕಲಿತೆ. ಆದರೆ ನನ್ನ ಕರ್ಮಗಳು ಆಗಲೇ ಫಲ ಕೊಡಲು ಪ್ರಾರಂಭಿಸಿದ್ದುವು. ನನ್ನ ಮನಸ್ಸಿನ ತೆರೆಯ ಮೇಲೆ ವಿವಿಧ ಬಣ್ಣಗಳಿಂದ ನನ್ನ ಕರಾಳ ಭವಿಷ್ಯ ಚಿತ್ರಿತವಾಗುತ್ತಿತ್ತು. ಅದು ಸಂಕಷ್ಟಗಳ ಕೊನೆಯಾಗಿರಲಿಲ್ಲ; ನನ್ನ ಭವಿಷ್ಯವನ್ನು ಕರಾಳವಾಗಿಸುವ ಯಾತನಾಮಯ ಪರಿಣಾಮಗಳ ಪ್ರಾರಂಭ ಮಾತ್ರವಾಗಿತ್ತು. ಶಿಕ್ಷೆ ಪ್ರಾರಂಭವಾಗಿತ್ತು; ಆದರೆ ಅದರಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ನಾನು ಇನ್ನೂ ಕಂಡುಹಿಡಿದಿರಲಿಲ್ಲ. ನನಗಾರೂ ಮಿತ್ರರಿರಲಿಲ್ಲ, ನನ್ನ ದುಷ್ಕರ್ಮಗಳಿಂದ ನನ್ನನ್ನು ನಾಶ ಮಾಡುವ ಶತ್ರುಗಳು ಮಾತ್ರವೇ ನನ್ನನ್ನು ಸುತ್ತುವರಿದಿದ್ದರು. ಹೀಗಾಗಿ ನಿರಾಶೆಯ ಸಮುದ್ರದ ಮೇಲೆ ನಾನು ಜಾರಿಹೋಗುತ್ತಿದ್ದೆ.

ನಾನು ಯೋಚಿಸಿದೆ, "ದೇವರು ಇರುವನೆ? ಅವನು ಮಾನವರ ಪ್ರಾರ್ಥನೆಯನ್ನು ಕೇಳಿಸಿಕೊಳ್ಳುವನೆ? ಅವನು ಮನುಷ್ಯನಿಗೆ ಕತ್ತಲಿನಿಂದ ಬೆಳಕಿನಡೆಗೆ ದಾರಿ ತೋರುವನೆ?" ನನ್ನ ಮನಸ್ಸು "ಹೌದು" ಎಂದಿತು. ಕೂಡಲೇ ನಾನು ಕಣ್ಣುಗಳನ್ನು ಮುಚ್ಚಿ ಹೀಗೆ ಪ್ರಾರ್ಥಿಸಿದೆ: "ಓ ದೇವರೆ, ನೀನು ಇರುವುದಾದರೆ, ಈ ಕಷ್ಟಗಳಿಂದ ನನ್ನನ್ನು ಪಾರುಮಾಡು. ನನಗೆ ಆಶ್ರಯ ನೀಡು; ನನಗೆ ಯಾರೂ ಇಲ್ಲ." ಈ ಮಾತುಗಳು ನನ್ನ ಚಿತ್ತದ ಆಳಕ್ಕೆ ಪ್ರವೇಶಿಸಿದವು; ದುಃಖದಲ್ಲಿದ್ದ ನನಗೆ ಸಮಾಧಾನ ನೀಡಿದುವು. ಭಗವದ್ಗೀತೆಯ ವಾಕ್ಯಗಳು ಸತ್ಯವೆಂದು ಕಂಡವು. ಭೌತಿಕ ಸೂರ್ಯನು ರಾತ್ರಿಯ ಕತ್ತಲನ್ನು ಹೋಗಲಾಡಿಸುವಂತೆ ಭರವಸೆಯ ಸೂರ್ಯನು ನನ್ನ ಮನದಲ್ಲಿ ಕವಿದಿದ್ದ ಕಾರ್ಮೋಡವನ್ನು ಕರಗಿಸಿದನು. ನನ್ನ ಕಷ್ಟಗಳ ಸಾಗರದ ಮಧ್ಯದಲ್ಲಿ ನನಗೆ ಒಂದು ನೆಲೆ ಸಿಕ್ಕಿತು. ಆದರೆ ನಾನು ಅಲ್ಲಿಯವರೆಗೆ ಸಂದೇಹ ಪ್ರವೃತ್ತಿಯನ್ನೇ ಬೆಳೆಸಿಕೊಂಡು ಬಂದಿದ್ದೆ. ದೇವರು ಇಲ್ಲವೆಂದೇ ದೊಡ್ಡದಾಗಿ ವಾದಿಸುತ್ತಿದ್ದೆ. ಹೀಗಿರುವಾಗ ಈ ಆಲೋಚನೆಗಳು ಯಾವ ಪ್ರಭಾವವನ್ನು ತಾನೇ ಬೀರಲು ಸಾಧ್ಯ? ಸಂಶಯಪಿಶಾಚಿ ಬೇಗ ತೊಲಗದು. ಮತ್ತೆ ನಾನು ಸಂದೇಹಕ್ಕೆ ಒಳಗಾದೆ. ಆದರೆ ದೇವರು ಇಲ್ಲವೆಂದು ದಿಟ್ಟವಾಗಿ ಹೇಳುವ ಧೈರ್ಯ ಆಗ ನನಗಿರಲಿಲ್ಲ.

ಆ ಸಮಯದಲ್ಲಿ ನನಗೆ ವಿಚಾರ ಮಾಡಲು ಇಚ್ಛೆಯಾಯಿತು. ಆ ಸ್ಥಿತಿಯಲ್ಲಿ ಕೆಲವು ವೇಳೆ ವಿಶ್ವಾಸ, ಕೆಲವು ವೇಳೆ ಅನುಮಾನ ಬರುತ್ತಿದ್ದುವು. ಯಾರಲ್ಲಿ ನಾನು ನನ್ನ ಸಮಸ್ಯೆಯನ್ನು ಹೇಳಿಕೊಂಡೆನೊ ಅವರೆಲ್ಲರೂ ಒಮ್ಮತದಿಂದ, "ಗುರುಗಳ ಉಪದೇಶವಿಲ್ಲದೆ ಸಂದೇಹನಿವಾರಣೆ ಆಗುವುದಿಲ್ಲ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ" ಎಂದು ಹೇಳಿದರು. ಆದರೂ ನನ್ನ ಬುದ್ಧಿ, ಮನುಷ್ಯಮಾತ್ರನೊಬ್ಬನನ್ನು ಗುರುವೆಂದು ಅಂಗೀಕರಿಸಲು ಒಪ್ಪಲಿಲ್ಲ. ಏಕೆಂದರೆ, ಗುರು ಬ್ರಹ್ಮ, ಗುರು ವಿಷ್ಣು, ಗುರು ಮಹೇಶ್ವರ ಎಂದು ಮುಂತಾಗಿ ಹೇಳುತ್ತ ಗುರುವಿಗೆ ನಮಸ್ಕರಿಸಬೇಕು. ನನ್ನಂತೆ ಇರುವ ಮತ್ತೊಬ್ಬ ವ್ಯಕ್ತಿಗೆ ನಾನು ಈ ರೀತಿ ಹೇಗೆ ಹೇಳಲಿ? ಅದು ಮೋಸವಾಗುವುದು. ಆದರೆ ಸಂದೇಹದ ಕಾಟ ಅಸಹನೀಯವಾಯಿತು. ಭಯಂಕರ ದ್ವಂದ್ವ ಯುದ್ಧ ನನ್ನ ಹೃದಯವನ್ನು ಇರಿಯಿತು. ಅದನ್ನು ಊಹಿಸಬಹುದು, ಆದರೆ ವಿವರಿಸಲಾಗುವುದಿಲ್ಲ. ಕಣ್ಣುಕಟ್ಟಿದ ಮನುಷ್ಯನೊಬ್ಬನನ್ನು ಇದ್ದಕ್ಕಿದ್ದಂತೆ ಬಲಾತ್ಕಾರವಾಗಿ ಎಳೆದೊಯ್ದು ಅನ್ನಾಹಾರಗಳನ್ನು ಕೊಡದೆ ಕತ್ತಲು ಕೋಣೆಯಲ್ಲಿ ಕೂಡಿಹಾಕಿದರೆ ಅವನ ಮನಸ್ಥಿತಿ ಹೇಗಿರಬಹುದೋ ಹಾಗಿತ್ತು ನನ್ನ ಸ್ಥಿತಿ. ಕೆಲವು ವೇಳೆ ಉದ್ವೇಗದಿಂದ ಉಸಿರುಕಟ್ಟಿದಂತಾಗುತ್ತಿತ್ತು. ನಿರಾಶೆ ಗರಗಸದಂತೆ ನನ್ನ ಅಂತರಂಗವನ್ನು ಕೊಯ್ಯುತ್ತಿತ್ತು. ಮತ್ತೆ ಕೆಲವು ವೇಳೆ ಹಿಂದಿನ ನೆನಪು ಮರುಕಳಿಸಿ ನನ್ನ ಹೃದಯದ ಕತ್ತಲು ಮೇರೆ ಮೀರುತ್ತಿತ್ತು. ಅಂತಹ ಒಂದು ಸಮಯದಲ್ಲಿ ಶ್ರೀರಾಮಕೃಷ್ಣರು, ನಮ್ಮ ಮನೆಯ ಓಣಿಯ ಮೂಲಕವಾಗಿಯೇ, ದೊಡ್ಡ ಭಕ್ತನಾದ ಬಲರಾಮನ ಮನೆಗೆ ಹೋಗುತ್ತಿದ್ದುದನ್ನು ಕಂಡೆ. ಮನಸ್ಸು ಪ್ರಬಲವಾಗಿ ಅವರೆಡೆಗೆ ನನ್ನನ್ನು ಸೆಳೆಯಿತು. ಈ ಭೇಟಿಯ ಬಗ್ಗೆ ಅನಂತರ ವಿವರಿಸುವೆ.

ಸ್ವಲ್ಪ ಕಾಲದ ಹಿಂದೆ 'ಇಂಡಿಯನ್ ಮಿರರ್' ಪತ್ರಿಕೆಯಲ್ಲಿ, ಪರಮಹಂಸರೊಬ್ಬರು ದಕ್ಷಿಣೇಶ್ವರದಲ್ಲಿ ವಾಸಿಸುತ್ತಿರುವರು; ಕೇಶವಚಂದ್ರ ಸೇನ ಅವನ ಅನುಯಾಯಿಗಳೊಂದಿಗೆ ಆಗಾಗ್ಗೆ ಅವರನ್ನು ಭೇಟಿಮಾಡುವನು ಎಂದು ಓದಿದ್ದೆ. ಬ್ರಾಹ್ಮ ಸಮಾಜದವರಿಗೆ ಅನೇಕ ವಿಚಿತ್ರ ಆಲೋಚನೆಗಳು ಬರುವುವು, ಆದ್ದರಿಂದ ಒಬ್ಬ ಕಪಟ ಪರಮಹಂಸರನ್ನು ಅವರು ಸೃಷ್ಟಿಸಿರಬಹುದು ಎಂದು ನನ್ನ ಅಲ್ಪ ತಿಳಿವಳಿಕೆಯಿಂದ ಭಾವಿಸಿದೆ. ಕೆಲವು ದಿನಗಳ ಬಳಿಕ, ನಮ್ಮ ಮನೆಯ ಹತ್ತಿರವಿದ್ದ, ಕೊಲ್ಕತಾ ಹೈಕೋರ್ಟಿನ ವಕೀಲರಾದ ದೀನನಾಥ ಬಸುವಿನ ಮನೆಗೆ ಪರಮಹಂಸರು ಬರುವರೆಂದು ತಿಳಿಯಿತು. ಕುತೂಹಲದಿಂದ, ಅವರೆಂತಹ ಪರಮಹಂಸರು ಎಂದು ನೋಡಲು ಹೋದೆ. ದೀನನಾಥ ಬಸುವಿನ ಮನೆಗೆ ಹೋದಾಗ ಪರಮಹಂಸರು ಅದಾಗಲೇ ಬಂದಿದ್ದರು; ಕೇಶವಸೇನ ಮತ್ತು ಇತರರಿಗೆ ಉಪದೇಶ ಮಾಡುತ್ತಿದ್ದರು. ಅವರೆಲ್ಲ ತದೇಕಚಿತ್ತರಾಗಿ ಕೇಳುತ್ತಿದ್ದರು. ಸಂಜೆಯಾಗಿತ್ತು. ದೀಪಗಳನ್ನು ಹಚ್ಚಿದ್ದರು. ಶ್ರೀರಾಮಕೃಷ್ಣರ ಮುಂದೆಯೂ ಒಂದು ದೀಪವನ್ನು ಇಟ್ಟಿದ್ದರು. ಆದರೆ ಅವರು ಪದೇ ಪದೇ, "ಸಂಜೆಯಾಯಿತೆ? ಸಂಜೆಯಾಯಿತೆ?" ಎಂದು ಕೇಳುತ್ತಿದ್ದರು. ನಾನು ಯೋಚಿಸಿದೆ, "ಇದೆಂತಹ ತೋರಿಕೆ! ಕತ್ತಲಾಗಿದೆ, ದೀಪಗಳು ಅವರ ಮುಂದೆಯೇ ಉರಿಯುತ್ತಿವೆ. ಆದರೂ ಅವರಿಗೆ ಸಂಜೆಯಾಗಿರುವುದು, ಆಗದಿರುವುದು ಗೊತ್ತಾಗುತ್ತಿಲ್ಲವಲ್ಲ." ಇದೇಕೋ ಅತಿಯಾಯಿತು ಎಂದುಕೊಂಡು, ಅವರ ಮೇಲಿನ ಗೌರವದಿಂದ ಬದಲು, ಅಗೌರವದಿಂದ ಹಿಂತಿರುಗಿದೆ.

ಕೆಲವು ವರ್ಷಗಳ ನಂತರ ಶ್ರೀರಾಮಕೃಷ್ಣರು, ರಮಾಕಾಂತ ಬೋಸ್ ರಸ್ತೆಯಲ್ಲಿರುವ ಬಲರಾಮ ಬಾಬುವಿನ ಮನೆಗೆ ಬರುವವರಿದ್ದರು. ಮಹಾತ್ಮನಾದ ಬಲರಾಮ ನಮ್ಮ ನೆರೆಹೊರೆಯ ಅನೇಕರನ್ನು ಆಹ್ವಾನಿಸಿದ್ದ. ನನಗೂ ಆಹ್ವಾನವಿತ್ತು; ಆದ್ದರಿಂದಲೇ ನಾನೂ ಹೋದೆ. ನಾನು ಅಲ್ಲಿಗೆ ಹೋದಾಗ ಶ್ರೀರಾಮಕೃಷ್ಣರು ಆಗಲೇ ಬಂದಿದ್ದರು. ಬಿಧು ಎಂಬ ನೃತ್ಯಗಾರ್ತಿ ಭಕ್ತಿಗೀತೆಗಳನ್ನು ಹಾಡಲು ಅಲ್ಲಿಗೆ ಬಂದಿದ್ದಳು; ಶ್ರೀರಾಮಕೃಷ್ಣರ ಪಕ್ಕದಲ್ಲಿ ಕುಳಿತಿದ್ದಳು. ಬೈಠಕ್‌ಖಾನೆಯಲ್ಲಿ ಬಹುಸಂಖ್ಯೆಯಲ್ಲಿ ಜನ ಸೇರಿದ್ದರು. ಇದ್ದಕ್ಕಿದ್ದಂತೆ, ಶ್ರೀರಾಮಕೃಷ್ಣರ ನಡವಳಿಕೆಯ ಬಗ್ಗೆ ನನಗೆ ಹೊಸ ಅರಿವು ಉಂಟಾಯಿತು. ಪರಮಹಂಸರು ಅಥವಾ ಯೋಗಿಗಳು ಎಂದು ಹೇಳಿಸಿಕೊಳ್ಳುವವರು ಯಾರೊಂದಿಗೂ ಮಾತನಾಡುವುದಿಲ್ಲ ಅಥವಾ ಯಾರಿಗೂ ನಮಸ್ಕಾರ ಮಾಡುವುದಿಲ್ಲ; ಬಹಳ ಒತ್ತಾಯ ಮಾಡಿದರೆ ಅವರಿಗೆ ಸೇವೆ ಮಾಡಲು ಅನುಮತಿ ಕೊಡುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಈ ಪರಮಹಂಸರ ನಡೆನುಡಿ ಅದಕ್ಕೆ ತೀರಾ ವಿಭಿನ್ನವಾಗಿತ್ತು. ಇವರು ಅತ್ಯಂತ ನಮ್ರರಾಗಿ ಎಲ್ಲರಿಗೂ ತಲೆಬಾಗಿ ವಂದಿಸಿ ಗೌರವ ತೋರುತ್ತಿದ್ದರು. ನನ್ನ ಹಳೆಯ ಮಿತ್ರನೊಬ್ಬ ಅವರ ಕಡೆ ಕೈ ತೋರಿಸಿ, "ಬಿಧು ಹಿಂದೆ ಅವರೊಡನೆ ನಿಕಟ ಸಂಬಂಧ ಹೊಂದಿದ್ದಳು; ಆದ್ದರಿಂದಲೇ ಅವರು ಅವಳೊಂದಿಗೆ ನಗುತ್ತ ಹಾಸ್ಯ ಮಾಡುತ್ತಿರುವುದು" ಎಂದನು. ಈ ಅವಹೇಳನದ ಮಾತುಗಳು ನನಗೆ ಇಷ್ಟವಾಗಲಿಲ್ಲ. ಆ ಸಮಯಕ್ಕೆ ಸರಿಯಾಗಿ ಅಮೃತ ಬಜ಼ಾರ್ ಪತ್ರಿಕೆಯ ಪ್ರಸಿದ್ಧ ಸಂಪಾದಕನಾದ ಶಿಶಿರ್ ಕುಮಾರ್ ಘೋಷ್ ಬಂದನು. ಅವನಿಗೆ ಶ್ರೀರಾಮಕೃಷ್ಣರ ಬಗ್ಗೆ ಗೌರವವಿದ್ದಂತೆ ಕಾಣಲಿಲ್ಲ. "ಅವರನ್ನು ನೋಡಿದ್ದು ಸಾಕು, ನಡೆ ಹೋಗೋಣ" ಎಂದನು. ನಾನು ಅಲ್ಲೇ ಇದ್ದು ಇನ್ನೂ ಸ್ವಲ್ಪ ನೋಡಬೇಕೆಂದಿದ್ದೆ. ಆದರೆ ಅವನು ಒತ್ತಾಯ ಮಾಡಿ ಕರೆದುಕೊಂಡು ಹೋಗಿಬಿಟ್ಟನು. ಇದು ನನ್ನ ಎರಡನೆಯ ಭೇಟಿ.

(ಮುಂದುವರಿಯುವುದು)